# ಭಕ್ತ ಕವಿ ಜಯದೇವ

ಸ್ವಾಮಿ ವೀರೇಶಾನಂದ



ಲಲಿತಲವಂಗಲತಾಪರಿಶೀಲನ ಕೋಮಲ ಮಲಯ ಸಮೀರೇ
ಮಧುಕರನಿಕರಕರಂಬಿತಕೋಕಿಲ ಕೂಜಿತ ಕುಂಜಕುಟೀರೇ ।
ವಿಹರತಿ ಹರಿರಿಹ ಸರಸ ವಸಂತೇ ನೃತ್ಯತಿ
ಯುವತಿಜನೇ ನ ಸಮಂ ಸಖಿ! ವಿರಹಿಜನಸ್ಯ ದುರಂತೇ ॥

'ಲವಂಗದ ಬಳ್ಳಿಗಳ ಸಂಪರ್ಕದಿಂದ, ಕೋಮಲವಾದ ಮಲಯ ಮಾರುತದಿಂದ, ಲತಾಮಂಟಪಗಳಲ್ಲಿ ಝೇಂಕರಿಸುತ್ತಿರುವ ದುಂಬಿಗಳ ಸಮೂಹದಿಂದ, ಕೋಗಿಲೆಗಳ ಕೂಜನದಿಂದ ಈ ವಸಂತಕಾಲ ರಮಣೀಯವಾಗಿದೆ. ವಿರಹಿಗಳಿಗೆ ದುಃಖ ನೀಡುವ ಈ ವಸಂತದಲ್ಲಿ ಶ್ರೀಕೃಷ್ಣನು ಗೋಪಿಯರೊಡನೆ ನರ್ತಿಸುತ್ತ ಕ್ರೀಡಿಸುತ್ತಿದ್ದಾನೆ.'

*(ಗೀತಗೋವಿಂದ, ಸರ್ಗ ೧, ಅಷ್ಟಪದಿ ೩)*

—ಮೇಲಿನ ಮನೋಹರ ಸಾಲುಗಳು 'ಗೀತಗೋವಿಂದ' ಎಂಬ ಕಾವ್ಯಗ್ರಂಥದಿಂದ ಆರಿಸಿಕೊಂಡವು. ಇದನ್ನು ರಚಿಸಿದವನು ಭಕ್ತ ಶಿರೋಮಣಿ ಜಯದೇವ. ಇಂದಿಗೂ ಈ ಕಾವ್ಯವು ಭಕ್ತರಸಿಕರನ್ನು ಮುದಗೊಳಿಸುತ್ತದೆ, ಶ್ರೀಕೃಷ್ಣ ಪ್ರೇಮದಿಂದ ನಲಿದಾಡುವಂತೆ ಮಾಡುತ್ತದೆ. ಪ್ರಸಿದ್ಧ ಗಾಯಕರು ಇಲ್ಲಿನ ಪದ್ಯಗಳನ್ನು ಸುಮಧುರ ರಾಗಗಳಲ್ಲಿ ಹಾಡುವುದನ್ನು ಕೇಳಿದಾಗ, ಮನಸ್ಸು ಭಗವದಾನಂದದಲ್ಲಿ ಮುಳುಗಿಹೋಗುತ್ತದೆ. ಇಂದಿಗೂ ಅತ್ಯಂತ ಪ್ರಸಿದ್ಧವಾಗಿರುವ ಈ ಅಷ್ಟಪದಿಗಳನ್ನು ರಚಿಸಿದ ಮಹಾಸಂತನ ಜೀವನವೂ ಅವನ ರಚನೆಗಳಷ್ಟೇ ರಮ್ಯವಾದುದು; ಅವನ ವ್ಯಕ್ತಿತ್ವವು ಕೂಡ ಅವನ ಕವನಗಳಿಂದ ಹೊರಹೊಮ್ಮುವ ಭಾವನೆಗಳಂತೆಯೇ ನವಿರಾದುದು, ಭಕ್ತಿಪೂರಿತವಾದುದು.

ಈ ಭಕ್ತ ಕವಿಯು ಕ್ರಿ.ಶ. ಸುಮಾರು ೧೧೭೦ ರಲ್ಲಿ ಜನಿಸಿದನೆಂದು ಹೇಳುತ್ತಾರೆ. ಅವನ ಜನ್ಮಸ್ಥಾನದ ಬಗ್ಗೆ ಎರಡು ಅಭಿಪ್ರಾಯಗಳಿವೆ. ಒಂದರ ಪ್ರಕಾರ ಬಂಗಾಳ ರಾಜ್ಯದ ಕೆಂದುಲಿ ಎಂಬ ಗ್ರಾಮ ಅವನ ಜನ್ಮಸ್ಥಾನ. ಮತ್ತೊಂದರ ಪ್ರಕಾರ ಒರಿಸ್ಸಾ ರಾಜ್ಯದ ಬಿಲ್ವಗ್ರಾಮ್. ಈ ಹಳ್ಳಿ ಪ್ರಸಿದ್ಧ ತೀರ್ಥಕ್ಷೇತ್ರವಾದ ಪುರೀಧಾಮದ ಬಳಿಯಲ್ಲಿದೆ.

## ಜನನ ಮತ್ತು ಬಾಲ್ಯ

ಜಯದೇವನ ತಂದೆಯ ಹೆಸರು ನಾರಾಯಣ ಶಾಸ್ತ್ರಿ. ಅವರು ಶ್ರದ್ಧಾವಂತ ಬ್ರಾಹ್ಮಣರು. ತಾಯಿಯ ಹೆಸರು ಕಮಲಾಬಾಯಿ. ಅವಳು ಪತಿವ್ರತಾಶಿರೋಮಣಿ. ದಂಪತಿಗಳಿಗೆ ಬಹುಕಾಲವಾದರೂ ಮಕ್ಕಳು ಹುಟ್ಟಲಿಲ್ಲ. ಶಾಸ್ತ್ರಿಗಳು ನಿರ್ಲಿಪ್ತರು. ಅವರು ಅದಕ್ಕಾಗಿ ಯಾವುದೇ ಪ್ರಾರ್ಥನೆ ಮಾಡಲಿಲ್ಲ. ಆದರೆ ಕಮಲಾಬಾಯಿಗೆ ಮಕ್ಕಳಾಗಬೇಕೆಂಬ ಆಸೆ. ಹೀಗಾಗಿ ಅವಳು ತನ್ನ ಪತಿಗೆ ತಿಳಿಯದಂತೆಯೇ ಮಗುವಿಗಾಗಿ ಭಗವಂತನನ್ನು ರಹಸ್ಯವಾಗಿ ಪ್ರಾರ್ಥಿಸಿದಳು. ಒಂದು ದಿನ ಶಾಸ್ತ್ರಿಗಳಿಗೆ ಕನಸಾಯಿತು. ''ನಿನ್ನ ಹೆಂಡತಿಯ ಆಸೆಯನ್ನು ಪೂರೈಸುತ್ತೇನೆ'' ಎಂದು ಭಗವಂತನೇ ದರ್ಶನ ನೀಡಿ ಹೇಳಿದನು. ನಾರಾಯಣ ಶಾಸ್ತ್ರಿಗಳು ಎಚ್ಚರಗೊಂಡು, ಹೆಂಡತಿಯನ್ನು ಕೇಳಿದರು, ''ನೀನು ಮಕ್ಕಳಿಗಾಗಿ ಭಗವಂತನನ್ನು ಪ್ರಾರ್ಥಿಸಿದ್ದೆಯಾ?'' ಎಂದು. ಆಕೆ ಭಯದಿಂದಲೇ ಹೌದೆಂದು ಒಪ್ಪಿಕೊಂಡಳು. ಶಾಸ್ತ್ರಿಗಳಿಗೆ ಹೆಂಡತಿಯ ಮೇಲೆ ವಿಪರೀತ ಕೋಪ ಬಂತು. ''ಎಂಥ ಕೆಲಸ ಮಾಡಿಬಿಟ್ಟೆ! ಭಗವಂತನಲ್ಲಿ ಸ್ವಾರ್ಥಪರವಾದ ಪ್ರಾರ್ಥನೆಯನ್ನು ಮಾಡುವುದೆ? ನಾನು ನಿನ್ನೊಡನೆ ಒಂದು ಮಾತನ್ನೂ ಆಡುವುದಿಲ್ಲ'' ಎಂದುಬಿಟ್ಟರು. ಪತಿಯೇ ದೇವರೆಂದು ನಂಬಿದ್ದ ಕಮಲಾಬಾಯಿಗೆ ದಿಗ್ಭ್ರಮೆಯಾಯಿತು. ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಾಪಣೆ ಕೇಳಿದರೂ ಶಾಸ್ತ್ರಿಗಳ ಮನಸ್ಸು ಕರಗಲಿಲ್ಲ. ಇಬ್ಬರೂ ಕೆಲವು ದಿನಗಳ ಮಟ್ಟಿಗೆ ಆಹಾರವನ್ನು ಮುಟ್ಟಲಿಲ್ಲ. ಕಡೆಗೆ ಒಬ್ಬ ಅಜ್ಞಾತ ಬ್ರಾಹ್ಮಣನು ಅವರ ಮನೆಗೆ ಬಂದನು. ಇಬ್ಬರಿಗೂ ಸಮಾಧಾನ ಮಾಡಿ, ಅವರ ವೈಮನಸ್ಯವನ್ನು ಬಗೆಹರಿಸಿದನು. ಹುಟ್ಟುವ ಮಗನು ಮಹಾಪಂಡಿತನೂ, ಶ್ರೇಷ್ಠ ಸಂತನೂ ಆಗುವನೆಂದು ಭವಿಷ್ಯ ನುಡಿದನು. ನಾರಾಯಣ ಶಾಸ್ತ್ರಿಗಳು ಭಗವಂತನೇ ಈ ಬ್ರಾಹ್ಮಣನ ರೂಪದಲ್ಲಿ ಬಂದಿರುವನೆಂದು ಎಣಿಸಿ ಸಂತೋಷಪಟ್ಟರು. ನವಮಾಸಗಳು ಕಳೆದ ನಂತರ ಕಮಲಾಬಾಯಿಗೆ ಗಂಡುಮಗುವಾಯಿತು. ಅವನೇ ಜಯದೇವ.

ಜಯದೇವನು ಬಾಲ್ಯದಿಂದಲೇ ಭಗವಂತನಲ್ಲಿ ಅಪಾರ ಭಕ್ತಿಯನ್ನು ಬೆಳೆಸಿಕೊಂಡಿದ್ದನು. ಅವನಿಗೆ ಐದು ವರ್ಷ ವಯಸ್ಸಾಗಿರುವಾಗಲೇ ಉಪನಯನವಾಯಿತು. ಕೆಲವೇ ವರ್ಷಗಳಲ್ಲಿ ಅವನು ಶಾಸ್ತ್ರಪಾರಂಗತನಾದನು. ಪರಂಪರಾಗತ ಶಿಕ್ಷಣವನ್ನು ಪಡೆದುಕೊಂಡನು. ಈ ಮಧ್ಯೆ ನಾರಾಯಣ ಶಾಸ್ತ್ರಿಗಳು ಮಗನ ಮದುವೆ ಮಾಡಬೇಕೆಂದು ಬಹು ಪ್ರಯತ್ನ ಮಾಡಿದರು. ಅದಕ್ಕೆ ಜಯದೇವನು ಒಪ್ಪಲೇ ಇಲ್ಲ. ಕಡೆಗೆ  ನಿರಾಸೆಯಿಂದ ಅವರು ಹೆಂಡತಿಯನ್ನು ಕರೆದುಕೊಂಡು, ಕಾಡಿಗೆ ಹೋದರು. ವಾನಪ್ರಸ್ಥ ಜೀವನವನ್ನು ಆರಂಭಿಸಿದರು.

### ದಿವ್ಯ ವಿವಾಹ

ಆದರೆ ಭಗವಂತನ ಇಚ್ಛೆಯೇ ಬೇರೆಯಾಗಿತ್ತು. ಜಗನ್ನಾಥ ಪುರೀಧಾಮದಲ್ಲಿ ದೇವಶರ್ಮನೆಂಬ ಮಹಾನ್ ಭಕ್ತನಿದ್ದನು. ಅವನಿಗೂ ಮಕ್ಕಳಿರಲಿಲ್ಲ. ಅದಕ್ಕಾಗಿ ಜಗನ್ನಾಥ ಸ್ವಾಮಿಯನ್ನು ಬೇಡಿಕೊಂಡನು. ಅವನಿಗೆ ಒಂದು ಹೆಣ್ಣುಮಗುವಾಯಿತು. ಆ ಮಗುವಿಗೆ ಪದ್ಮಾವತಿ ಎಂದು ಹೆಸರಿಟ್ಟರು. ಅವರಿಗೆ ಅನಂತರ ಗಂಡುಮಕ್ಕಳೂ ಹುಟ್ಟಿದರು. ಒಂದು ದಿನ ದೇವಶರ್ಮನು ಪತ್ನಿಯೊಡನೆ ಜಗನ್ನಾಥನ ಸಾನ್ನಿಧ್ಯಕ್ಕೆ ಬಂದನು. ಹೆಣ್ಣು ಮಗುವನ್ನು ಪರಮಾತ್ಮನಿಗೆ ಒಪ್ಪಿಸಿಬಿಟ್ಟನು. ಹಾಗೆ ಮಾಡುತ್ತೇನೆಂದು ಅವನು ಮೊದಲೇ ಹರಕೆ ಹೊತ್ತಿದ್ದನು.

ಅಂದು ರಾತ್ರಿ ದೇವಶರ್ಮನಿಗೆ ಕನಸಿನಲ್ಲಿ ಪ್ರಭು ಜಗನ್ನಾಥನ ದರ್ಶನವಾಯಿತು. ''ನಾನು ನಿನ್ನ ಮಗಳನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದೇನೆ.. ಆದರೆ ಅವಳನ್ನು ನೀನು ಜಯದೇವನಿಗೆ ಮದುವೆ ಮಾಡಿಕೊಡು. ಅವನು ನನ್ನ ಭಕ್ತ'' ಎಂದು ಅವನು ಆದೇಶವಿತ್ತನು.

ಆ ಸಮಯದಲ್ಲಿ ಜಯದೇವನು ಗ್ರಾಮದ ಹೊರವಲಯದಲ್ಲಿ ಪರ್ಣಕುಟೀರವನ್ನು ಕಟ್ಟಿಕೊಂಡು ಸಾಧನೆ-ಭಜನೆ ಮಾಡುತ್ತಿದ್ದನು. ಸದಾ ಕಾಲವೂ ಪ್ರಭು ಜಗನ್ನಾಥಸ್ವಾಮಿಯ ಚಿಂತನೆ ಮಾಡುತ್ತಿದ್ದನು. ಬಡತನವಿದ್ದರೂ ಪರಮಾನಂದಭರಿತನಾಗಿದ್ದನು. ಅಲ್ಲಿಗೆ ದೇವಶರ್ಮನು ಮಗಳನ್ನು ಕರೆದುಕೊಂಡು ಬಂದನು. ಜಗನ್ನಾಥ ಸ್ವಾಮಿಯ ಆದೇಶದಂತೆ ನನ್ನ ಮಗಳನ್ನು ನಿನಗೆ ಅರ್ಪಿಸುತ್ತಿರುವುದಾಗಿ ನಿವೇದಿಸಿಕೊಂಡನು. ದಯವಿಟ್ಟು ಸ್ವೀಕರಿಸಬೇಕೆಂದು ಕೇಳಿಕೊಂಡನು. ಜಯದೇವನು ಇದಕ್ಕೆ ಒಪ್ಪಲಿಲ್ಲ. ಕಡುಬಡವನಾದ ತನಗೆ ಹೆಂಡತಿಯನ್ನು ಕಾಪಾಡುವುದು ಅಸಾಧ್ಯವೆಂದು ನಿರಾಕರಿಸಿಬಿಟ್ಟನು. ದೇವಶರ್ಮನು ತನ್ನ ಹಠವನ್ನು ಬಿಡಲಿಲ್ಲ. ಪದ್ಮಾವತಿಯ ಕಡೆಗೆ ತಿರುಗಿ, ''ಅಮ್ಮಾ, ಮಗಳೇ, ಇಂದಿನಿಂದ ಇವನೇ ನಿನ್ನ ಪತಿದೇವ. ಇವನ ಸೇವೆಯೇ ನಿನಗೆ ಸರ್ವಸ್ವ. ಪತಿಯ ಸೇವೆಯಿಂದ ಇಹ-ಪರ ಎರಡರಲ್ಲೂ ನಿನಗೆ ಶುಭವಾಗುತ್ತದೆ. ಇನ್ನು ನೀನುಂಟು, ಇವನುಂಟು'' ಎಂದು ಹೇಳಿ ಹೊರಟೇಹೋದನು.

ಆ ಪಾಪದ ಹುಡುಗಿ ಬಹುಕಾಲ ಜಯದೇವನ ಪಕ್ಕದಲ್ಲಿಯೇ ನಿಂತುಕೊಂಡಿದ್ದಳು. ಅನಂತರ ಜಯದೇವನು ಬಾಯಿಬಿಟ್ಟನು: ''ನಿನ್ನ ತಂದೆ ನಿನ್ನನ್ನು ಇಲ್ಲಿ ಬಿಟ್ಟು ಹೋಗಿಬಿಟ್ಟರು. ನೀನು ಹೇಗೆ ತಾನೇ ಈ ಘೋರ ಅರಣ್ಯದಲ್ಲಿ ವಾಸ ಮಾಡುವೆ?'' ಪದ್ಮಾವತಿ ಉತ್ತರಿಸಿದಳು, ''ಪ್ರಭೂ, ಇದೇನು ಹೀಗೆ ಹೇಳುತ್ತಿರುವಿರಿ? ನನ್ನ ತಂದೆಯು ನನ್ನನ್ನು ನಿಮಗೆ ಧಾರೆಯೆರೆದಿದ್ದಾರೆ. ನಾನು ಈಗ ನಿಮಗೆ ಸೇರಿದವಳು. ಹೀಗಿರುವಾಗಿ ನಾನು ಹೇಗೆ ತಾನೇ ಒಬ್ಬಂಟಿಯಾಗಿ ಇರಲು ಸಾಧ್ಯ? ನೀವು ಯಾವತ್ತೂ ನನ್ನೊಡನೆ ಇರುತ್ತೀರಲ್ಲವೆ?''' ಇದನ್ನು ಆಲಿಸಿದ ಜಯದೇವನು ಹೀಗೆ ಚಿಂತಿಸಿದನು: ''ಹೌದಲ್ಲವೇ, ಇವಳು ಹೇಳುವುದು ಸತ್ಯ. ಇವಳನ್ನು ತ್ಯಜಿಸುವುದು ಪಾಪವೇ ಸರಿ. ಈಗ ಇವಳ ತಂದೆಯ ಮನೆಗೆ ಕರೆದುಕೊಂಡು ಹೋಗಿ ವಿಧ್ಯುಕ್ತವಾಗಿ ಇವಳೊಡನೆ ವಿವಾಹವಾಗುತ್ತೇನೆ.'' ದೇವಶರ್ಮನ ಮನೆಯಲ್ಲಿ ವೈದಿಕ ವಿಧಿಪ್ರಕಾರ ಅವರಿಬ್ಬರ ವಿವಾಹ ನಡೆದುಹೋಯಿತು.

ಜಯದೇವ - ಪದ್ಮಾವತಿ ಇಬ್ಬರೂ ಆದರ್ಶ ಜೀವನವನ್ನು ನಡೆಸಿದರು. ಜಯದೇವನು ಬಹಳ ಉದಾರಿಯಾಗಿದ್ದನು. ಬಡವರು ಮತ್ತು ಬ್ರಾಹ್ಮಣರಿಗೆ ದಾನ ನೀಡುತ್ತಿದ್ದನು. ಒಬ್ಬನಾದರೂ ಅತಿಥಿ ಬಾರದೆ ಊಟಕ್ಕೆ ಕುಳಿತುಕೊಳ್ಳುತ್ತಿರಲಿಲ್ಲ. ಹೀಗಾಗಿ ಅವನ ತಂದೆ ಇವನಿಗಾಗಿ ಉಳಿಸಿದ್ದ ಅಷ್ಟಿಷ್ಟು ಹಣವೂ ವ್ಯಯವಾಗಿ ಹೋಯಿತು. ಅಕ್ಕಿಯನ್ನು ಬೇಡಿತಂದು, ಸಾಂಪ್ರದಾಯಿಕ ಬ್ರಾಹ್ಮಣ ಶೈಲಿಯಲ್ಲಿ ಪರಿಶುದ್ಧ ಜೀವನವನ್ನು ನಡೆಸುತ್ತಿದ್ದರು. ಇಷ್ಟಾದರೂ ದಂಪತಿಗಳು ಆನಂದದಿಂದ ಕೂಡಿದ್ದರು. ಅವರ ಹೃದಯಗಳು ಪರಿಶುದ್ಧ ಪ್ರೇಮ ಮತ್ತು ಭಕ್ತಿಗಳಿಂದ ತುಂಬಿ ತುಳುಕುತ್ತಿದ್ದವು. ಎಲ್ಲರೂ ಅವರಿಗೆ ಗೌರವ ತೋರುತ್ತಿದ್ದರು.

### ಗೀತಗೋವಿಂದ

ಹೀಗೆ ತಪಸ್ಯೆಯ ಜೀವನವನ್ನು ನಡೆಸುತ್ತಿದ್ದರು ಈ ಶ್ರದ್ಧಾವಂತ ದಂಪತಿಗಳು. ಈ ಸಮಯದಲ್ಲಿಯೇ ಜಯದೇವನು ತನ್ನ ಜೀವನದ ಅತ್ಯಂತ ಶ್ರೇಷ್ಠವಾದ ಕಾವ್ಯ '**ಗೀತಗೋವಿಂದ**'ವನ್ನು ರಚಿಸಿದನು. ಒಮ್ಮೆ ತಾನು ಬರೆದ ಒಂದು ಸಾಲಿನ ಬಗ್ಗೆ ಅವನಿಗೇ ಅನುಮಾನವಾಯಿತು. ಅದನ್ನು ಅಳಿಸಿ, ಊಟದ ಸಮಯವಾಗಿದ್ದರಿಂದ, ಸ್ನಾನಮಾಡಿ ಬರಲೆಂದು ನದಿಗೆ ಹೋದನು. ಅಷ್ಟರಲ್ಲಿ ಶ್ರೀಕೃಷ್ಣನೇ ಜಯದೇವನ ವೇಷದಲ್ಲಿ ಬಂದನು. ಜಯದೇವನು ಅಳಿಸಿದ್ದ ಸಾಲನ್ನು ತಿದ್ದಿ, ಇನ್ನೂ ಸೊಗಸಾಗಿ ತನ್ನ ಹಸ್ತಾಕ್ಷರಗಳಲ್ಲಿಯೇ ಬರೆದನು. ಪದ್ಮಾವತಿಯು ನೀಡಿದ ಊಟವನ್ನು ಉಂಡು ಮರೆಯಾದನು. ಜಯದೇವನು ಈ ಸಾಲಿನ ಬಗ್ಗೆಯೇ ಚಿಂತಿಸುತ್ತ ಮನೆಗೆ ವಾಪಸ್ಸು ಬಂದನು. ಅವನನ್ನು ಕಂಡು ಪದ್ಮಾವತಿ ಆಶ್ಚರ್ಯಗೊಂಡಳು. ಜಯದೇವನೂ ಅಚ್ಚರಿಗೊಂಡು ತನ್ನ ತಾಳೆ ಪತ್ರಗಳತ್ತ ದೃಷ್ಟಿ ಹರಿಸಿದನು. ತಾನು ಅಳಿಸಿದ್ದ ಸಾಲು ತಿದ್ದಿ ಬರೆದಿತ್ತು. ಅದನ್ನು ಕಂಡು, ಪರಮಾತ್ಮನೇ ತನ್ನ ವೇಷದಲ್ಲಿ ಬಂದು ಈ ಸಾಲನ್ನು ಬರೆದಿದ್ದಾನೆಂದು ತಿಳಿದು ಆನಂದಗೊಂಡನು. ''ನಿನಗೆ ಭಗವಂತನ ದರ್ಶನವಾಯಿತು!'' ಎಂದು ತನ್ನ ಪತ್ನಿಯಾದ ಪದ್ಮಾವತಿಯನ್ನು ಕೊಂಡಾಡಿದನು.

ಗೀತಗೋವಿಂದ ಕಾವ್ಯವು ಅತ್ಯಂತ ಪ್ರಸಿದ್ಧವಾಯಿತು. ಅದರ ಅಷ್ಟಪದಿಗಳನ್ನು ದೇವಸ್ಥಾನಗಳಲ್ಲಿ ಹಾಡುವುದು ವಾಡಿಕೆಯಾಯಿತು. ಅದರಲ್ಲಿ ಬರುವ 'ದಶಾವತಾರ ಸ್ತೋತ್ರ'ವಂತೂ ಎಲ್ಲರಿಗೂ ಪ್ರಿಯವಾಯಿತು. ಅಂಥವರಲ್ಲಿ ಅಲ್ಲಿನ ರಾಜನೂ ಒಬ್ಬ. ಅವನು ಕೂಡ ಒಬ್ಬ ಕವಿಯೇ. ಹೀಗಾಗಿ ಜಯದೇವನ ಕವಿತಾಸಾಮರ್ಥ್ಯವನ್ನು ಕಂಡು ಅವನಿಗೆ ಹೊಟ್ಟೆಕಿಚ್ಚು. ಅವನು ಕೂಡ ಇನ್ನೊಂದು ಗೀತಗೋವಿಂದವನ್ನು ರಚಿಸಿದ್ದನು. ತನ್ನ ರಚನೆ ಜಯದೇವನ ರಚನೆಗಿಂತ ಉತ್ತಮವಾದುದು ಎಂದು ಭಾವಿಸಿದ್ದನು.

ಒಮ್ಮೆ ಜಗನ್ನಾಥ ದೇಗುಲಕ್ಕೆ ರಾಜನು ಆಗಮಿಸಿದನು. ಜಯದೇವನು ಅಲ್ಲಿ ಭಗವಂತನ ಲೀಲೆಗಳನ್ನು ಕುರಿತು ಹಾಡುತ್ತ ಕುಣಿಯುತ್ತ ಆನಂದದಿಂದ ಕಾಲಕಳೆಯುತ್ತಿದ್ದನು. ಸ್ವರಚಿತ 'ಗೀತಗೋವಿಂದ' ಕಾವ್ಯದ ಹಾಡುಗಳನ್ನೇ ತನ್ನ ಸುಮಧುರ ಕಂಠದಿಂದ ಹಾಡುತ್ತಿದ್ದನು. ಇದನ್ನು ಕಂಡು ರಾಜನಿಗೆ ಮುನಿಸು ಉಂಟಾಯಿತು. ''ನೀನೇಕೆ ನನ್ನ ಗೀತಗೋವಿಂದವನ್ನು ಹಾಡುತ್ತಿಲ್ಲ?'' ಎಂದು ಕೇಳಿದನು. ಅದಕ್ಕೆ ಜಯದೇವನು, ''ಭಗವಂತನಿಗೆ ನಿನ್ನ ಗೀತಗೋವಿಂದದ ಮೇಲೆ ನನ್ನ ಗೀತಗೋವಿಂದದ ಮೇಲೆ ಇರುವಷ್ಟು ಪ್ರೀತಿಯಿಲ್ಲ. ಬೇಕಾದರೆ ಪರೀಕ್ಷೆ ಮಾಡಿ ನೋಡೋಣ'' ಎಂದನು.

ರಾಜನ ಆಜ್ಞೆಯಂತೆ ರಾಜನ ಮತ್ತು ಜಯದೇವನ ಗ್ರಂಥ – ಇವೆರಡನ್ನೂ ಭಗವಂತನ ವಿಗ್ರಹದ ಮುಂದೆ ಇರಿಸಲಾಯಿತು. ಇಬ್ಬರೂ ಜಗನ್ನಾಥ ಪ್ರಭುವನ್ನು ಪ್ರಾರ್ಥಿಸಿದರು. ಆಮೇಲೆ ಗರ್ಭಮಂದಿರದ ಬಾಗಿಲು ಮುಚ್ಚಿ ಇಬ್ಬರೂ ಹೊರ ಬಂದರು. ಸ್ವಲ್ಪ ಸಮಯದ ನಂತರ ಬಾಗಿಲನ್ನು ತೆರೆದು ಒಳಕ್ಕೆ ಹೋದರು. ರಾಜನೇ ಮೊದಲು ಹೋದನು. ಜಯದೇವನ ಗ್ರಂಥವೇ ತನ್ನ ಗ್ರಂಥಕ್ಕಿಂತ ಮೇಲೆ ಇರುವುದನ್ನು ಕಂಡು ಬೆರಗಾದನು.

ಇದರಿಂದ ರಾಜನು ದುಃಖಿತನಾಗಿ, ಅನ್ನ, ನೀರು ಬಿಟ್ಟು ಗೋಳಾಡಿದನು. ಕಡೆಗೆ ಸ್ವಪ್ನದಲ್ಲಿ ಜಗನ್ನಾಥ ಸ್ವಾಮಿಯ ದರ್ಶನವಾಯಿತು. ''ಇದೇಕೆ ಹೀಗೆ ಕಷ್ಟಪಡುತ್ತಿರುವೆ? ನನಗೆ ಜಯದೇವನ 'ಗೀತಗೋವಿಂದ'ವೆಂದರೆ ಅಚ್ಚುಮೆಚ್ಚು. ನಿನ್ನ ರಚನೆಯೂ ಚೆನ್ನಾಗಿಯೇ ಇದೆ. ಅದೂ ನನಗೆ ಇಷ್ಟ. ಆದರೆ ಜಯದೇವನು ಸಂತ. ಅವನ ಭಕ್ತಿ ಪರಿಶುದ್ಧವಾದುದು. ಹಾಗೆಂದೇ ಅವನ ರಚನೆ ನನಗೆ ಬಹಳ ಇಷ್ಟವಾದುದು'' ಎಂದು ಪ್ರಭು ಹೇಳಿದನು. ಇದಾದ ಬಳಿಕೆ ರಾಜನು ಜಯದೇವನ ದೊಡ್ಡ ಅನುಯಾಯಿಯಾದನು. ಇಡೀ ಗೀತಗೋವಿಂದವನ್ನು ತಾನೇ ಮರುಪಾಠ ಮಾಡಿಕೊಂಡನು. ಜಯದೇವನ ಈ ಮಹಾನ್ ಕೃತಿಯನ್ನು ತನ್ನ ರಾಜ್ಯದಲ್ಲೆಲ್ಲ ಪ್ರಚಾರ ಮಾಡಿದನು.

ಗೀತಗೋವಿಂದದ ಮಹಿಮೆ ಅಪಾರ. ಒಮ್ಮೆ ಒಬ್ಬ ಮಹಿಳೆ ಗೀತಗೋವಿಂದವನ್ನು ಸುಮಧುರವಾಗಿ ಭಕ್ತಿಪೂರಿತವಾಗಿ ಹಾಡಿಕೊಳ್ಳುತ್ತ, ಮಾರಾಟ ಮಾಡಲು ಕಾಡಿನಲ್ಲಿ ಹಣ್ಣುಗಳನ್ನು


'ಗೀತಗೋವಿಂದ'ವನ್ನು ಆಧರಿಸಿದ ಸಾಂಪ್ರದಾಯಿಕ ಚಿತ್ರ

ಕೊಯ್ಯುತ್ತಿದ್ದಳು. ಪ್ರಭು ಜಗನ್ನಾಥನು ಅವಳ ಸುಮಧುರ ಹಾಡನ್ನು ಕೇಳಿ ಆಕರ್ಷಿತನಾದನು. ಅವಳೊಡನೆ ತಾನೂ ಕಾಡುಮೇಡು ಸುತ್ತಿದನು. ಮಧ್ಯೆ ಮಧ್ಯೆ ಮುಳ್ಳು ಪೊದೆಗಳಲ್ಲಿಯೂ ನುಗ್ಗಿದ್ದರಿಂದ ಅವನ ಪೀತಾಂಬರ ಅಲ್ಲಲ್ಲಿ ಹರಿದುಹೋಯಿತು. ಮರುದಿನ ದೇವಸ್ಥಾನವನ್ನು ತೆರೆದುನೋಡಿದಾಗ, ಭಗವಂತನ ವಸ್ತ್ರ ಜೀರ್ಣವಾಗಿತ್ತು. ಇದನ್ನು ಕಂಡು ಪೂಜಾರಿಗಳು ಮತ್ತು ರಾಜ — ಇಬ್ಬರೂ ಆಶ್ಚರ್ಯಪಟ್ಟರು. ಕಡೆಗೆ ಜಗನ್ನಾಥನೇ ರಾಜನ ಕನಸಿನಲ್ಲಿ ಬಂದು, ನಡೆದ ಸಂಗತಿಯನ್ನು ಹೇಳಿದನು. ರಾಜನು ಜಯದೇವ ಮತ್ತು ಆ ಬಡ ಮಹಿಳೆ ಇಬ್ಬರನ್ನೂ ಕರೆಸಿ, ಹೊಗಳಿ ಸನ್ಮಾನ ಮಾಡಿದನು; ಧನಕನಕಗಳನ್ನು ಕೊಟ್ಟನು. ಪ್ರತಿ ನಿತ್ಯವೂ ಆ ಭಕ್ತಮಹಿಳೆ ತನ್ನೆದರು ಗೀತಗೋವಿಂದವನ್ನು ಹಾಡಬೇಕೆಂದು ವಿಧಿಸಿದನು.

### ಜಯದೇವನಿಗೆ ಎದುರಾದ ವಿಪತ್ತುಗಳು

ಜಯದೇವನ ಮಾವ ದೇವಶರ್ಮನು ಒಮ್ಮೆ ಬಂದು, ಕೆಲವು ಕಾಲ ತಂಗಿದ್ದು, ಮಗಳನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಸ್ವಲ್ಪ ದಿವಸಗಳ ಕಾಲ ಅವಳು ತನ್ನ ತಾಯಿಯ ಜೊತೆಯಲ್ಲಿರಲಿ ಎನ್ನುವುದೇ ತಂದೆಯ ಆಸೆಯಾಗಿತ್ತು.

ಅತ್ತ ಪದ್ಮಾವತಿ ತಂದೆಯ ಮನೆಗೆ ಹೋದಳು. ಇತ್ತ ಜಯದೇವನು ಮನೆಯಲ್ಲಿ ಒಬ್ಬನೇ ಇದ್ದನು. ಭಗವಾನ್ ದಾಸ್ ಎಂಬ ಶ್ರೀಮಂತನು ನೆರೆಯ ಗ್ರಾಮದಲ್ಲಿ ವಾಸವಾಗಿದ್ದನು. ಇದೇ ಸಮಯದಲ್ಲಿ ಅವನು ಜಯದೇವನನ್ನು ತನ್ನ ಮನೆಗೆ ಆಹ್ವಾನಿಸಿದನು. ಕೆಲವು ದಿನ ತಂಗಿದ ನಂತರ, ಅವನನ್ನು ವಾಪಸ್ಸು ಕಳಿಸಿಕೊಟ್ಟನು. ಅನೇಕ ಬೆಲೆಬಾಳುವ ಕೊಡುಗೆಗಳಿಂದ ಕೂಡಿದ ಒಂದು ಗಾಡಿಯೂ ಅವನ ಜೊತೆಗೇ ಹೋಯಿತು. ಮಾರ್ಗಮಧ್ಯದಲ್ಲಿ ದಟ್ಟವಾದ ಕಾಡು. ಅಲ್ಲಿ ದರೋಡೆಕೋರರು ಜಯದೇವನನ್ನು ಮುತ್ತಿದರು. ಬೆಲೆಬಾಳುವ ವಸ್ತುಗಳನ್ನು ಲೂಟಿ ಮಾಡಿದ್ದಲ್ಲದೆ, ಜಯದೇವನ ಕೈಕಾಲುಗಳನ್ನು ಕತ್ತರಿಸಿ ಹಾಕಿದರು. ಅಷ್ಟೂ ಅಲ್ಲದೆ, ನೀರಿಲ್ಲದ ಪಾಳುಬಾವಿಯಲ್ಲಿ ಅವನನ್ನು ತಳ್ಳಿ ಹೋಗಿಬಿಟ್ಟರು.

ಜಯದೇವನು ಈ ಎಲ್ಲ ಕಷ್ಟಗಳನ್ನು ಸಂಯಮದಿಂದ ಸಹಿಸಿಕೊಂಡನು. ಈ ಕಳ್ಳರನ್ನು ಕ್ಷಮಿಸಬೇಕೆಂದು ಭಗವಂತನನ್ನು ಪ್ರಾರ್ಥಿಸಿಕೊಂಡನು. ತನ್ನನ್ನು ಭಗವಂತನ ರಕ್ಷಣೆಗೆ ಒಪ್ಪಿಸಿದನು.



ಭಗವಂತನು ಇದೆಲ್ಲವನ್ನೂ ತನ್ನ ಒಳಿತಿಗಾಗಿಯೇ ಮಾಡುತ್ತಿರುವ ನೆಂದು ಅವನು ಭಾವಿಸಿದನು. ಭಗವಂತನ ನಿಜವಾದ ಭಕ್ತರು ಈ ಬಗೆಯ ಸಮಬುದ್ಧಿಯನ್ನು ಬೆಳೆಸಿಕೊಳ್ಳುತ್ತಾರೆ. ಅವರು ಯಾವಾ ಗಲೂ ವಿಪತ್ತುಗಳನ್ನು ಮತ್ತು ಸಂಕಷ್ಟಗಳನ್ನು ಸ್ವಾಗತಿಸುತ್ತಾರೆ.

ಆ ಪ್ರಾಂತದ ರಾಜನು ಇದೇ ಸಮಯದಲ್ಲಿ ಬೇಟೆಗಾಗಿ ಕಾಡಿಗೆ ಬಂದಿದ್ದನು. ತನ್ನ ದಾಹವನ್ನು ತಣಿಸಿಕೊಳ್ಳಲು ಜಯ ದೇವನು ಇದ್ದ ಬಾವಿಯನ್ನೇ ಇಣುಕಿ ನೋಡಿದನು. ಅಲ್ಲಿ ಅವನಿಗೆ ನೀರೇನೂ ಸಿಗಲಿಲ್ಲ. ಅದಕ್ಕೆ ಬದಲಾಗಿ ರಕ್ತಸಿಕ್ತವಾಗಿದ್ದ ಮಾನವ ದೇಹ ಕಾಣಿಸಿತು. ಅವನು ಒಡನೆ ಜಯದೇವನನ್ನು ಬಾವಿಯಿಂದ ಮೇಲೆತ್ತಿಸಿದನು. ತನ್ನ ರಾಜಧಾನಿಗೆ ಕರೆದು ಕೊಂಡು ಬಂದನು. ಮಾರ್ಗಮಧ್ಯದಲ್ಲಿ ರಾಜನಿಗೆ ಜಯದೇವನ ಪರಿಚಯವಾಯಿತು. ಒಡನೆ ರಾಜನು ಜಯದೇವನ ಕಾಲಿಗೆ ಬಿದ್ದು, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಕೇಳಿಕೊಂಡನು. ಭಾರೀ ಮೆರವಣಿಗೆಯಲ್ಲಿ ಅವನನ್ನು ತನ್ನ ರಾಜಧಾನಿಗೆ ಕರೆದು ಕೊಂಡು ಹೋದನು.

ಜಯದೇವನ ಸಾತ್ವಿಕ ನಡೆನುಡಿಗಳು, ಅಪಾರವಾದ ಜ್ಞಾನ ರಾಶಿ, ಆಧ್ಯಾತ್ಮಿಕ ಸಿದ್ಧಿ, ಭಗವಂತನಲ್ಲಿ ಅವನಿಗಿದ್ದ ಶರಣಾಗತಿ – ಇವೆಲ್ಲವನ್ನೂ ಕಂಡು ರಾಜನು ಅತ್ಯಂತ ಪ್ರಭಾವಿತನಾದನು. ತನಗೆ ಸಂನ್ಯಾಸ ದೀಕ್ಷೆ ಕೊಡಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಜಯದೇವನು ಹೀಗೆ ಹೇಳಿದನು: ''ಓ ರಾಜನೇ, ಸಂನ್ಯಾಸವೆಂದರೆ ಬರಿಯ ಬಾಹ್ಯ ತ್ಯಾಗವಲ್ಲ. ಮಾನಸಿಕ ಸಂನ್ಯಾಸವೇ ನೈಜ ಸಂನ್ಯಾಸ. ಆಸೆ ಮತ್ತು ಅಹಂಕಾರವನ್ನು ಬಿಟ್ಟುಬಿಡುವುದೇ ನಿಜ ವಾದ ಸಂನ್ಯಾಸ. ಒಬ್ಬನು ತನ್ನ ಹೆಂಡತಿ, ಮಕ್ಕಳು ಮತ್ತು ಸಂಪ ತ್ತನ್ನು ತ್ಯಜಿಸಿದ ಮಾತ್ರಕ್ಕೆ ನಿಜವಾದ ಸಂನ್ಯಾಸಿಯಾಗಲಾರ. ಮನಸ್ಸಿನಲ್ಲಿಯೇ ಆಸಕ್ತಿಯನ್ನು ಇಟ್ಟುಕೊಂಡಿರಬಹುದು. ಆದ್ದ ರಿಂದ ಬಾಹ್ಯ ಸಂನ್ಯಾಸದಿಂದ ಹೆಚ್ಚೇನೂ ಪ್ರಯೋಜನವಾಗದು. ಸಾಧ್ಯವಿದ್ದರೆ, ನನ್ನ ಹಾಗೆ ಗೃಹಸ್ಥ ಸಂನ್ಯಾಸಿಯಾಗಲು ಪ್ರಯತ್ನ ಪಡು. ಹೊರಗಡೆ ರಾಜ್ಯಭಾರವನ್ನು ನಿರ್ವಹಿಸುತ್ತಲೇ, ಆಂತರಿಕ ವಾಗಿ ಸಂನ್ಯಾಸೀ ಜೀವನ ನಡೆಸು.''

ಜಯದೇವನ ಮಾತಿನಲ್ಲಿ ಅಡಗಿದ್ದ ಸತ್ಯ ರಾಜನಿಗೆ ಅರಿವಾ ಯಿತು. ಆಗಲೇ ರಾಜನಿಗೆ ಗೊತ್ತಾದುದು, ಜಯದೇವನಿಗೆ ಪತ್ನಿ ಯಿದ್ದಾಳೆ ಎಂದು. ಒಡನೆ ಪದ್ಮಾವತಿಯನ್ನು ಕರೆತರಲು ಅವನು ಹೆಣ್ಣಾಳುಗಳನ್ನು ಕಳಿಸಿದನು.

ಇತ್ತ ಪದ್ಮಾವತಿಯು ತನ್ನ ತಂದೆಯ ಮನೆಯಿಂದ ಬಿಲ್ವ ಗ್ರಾಮ್‌ಗೆ ಹಿಂತಿರುಗಿದ್ದಳು. ಮನೆಯಲ್ಲಿ ತನ್ನ ಪತಿಯನ್ನು ಕಾಣದೆ ಕಂಗಾಲಾದಳು. ತನ್ನನ್ನು ತ್ಯಜಿಸಿ ಸಂನ್ಯಾಸಿಯಾಗಿ ಬಿಟ್ಟಿ ರುವನೆಂದು ಭಾವಿಸಿ ದುಃಖಿಸಿದಳು. ಜಯದೇವನಿಗಾಗಿ ಹತ್ತಿ ರದ ಹಳ್ಳಿಗಳನ್ನೆಲ್ಲ ಹುಡುಕಿಸಿದಳು. ಅಷ್ಟರಲ್ಲಿ ರಾಜನ ಕಡೆಯ ಸ್ತ್ರೀಯರಿಂದ ವರ್ತಮಾನ ತಿಳಿದು ಸಂತೋಷಗೊಂಡಳು. ತನ್ನ ಪತಿಯನ್ನು ಕಾಣಲು ಒಡನೆಯೇ ರಾಜಧಾನಿಗೆ ಹೋದಳು. ರಾಜನ ಅರಮನೆಯಲ್ಲಿ ಜಯದೇವನನ್ನು ಕಂಡಳು. ಅವಳ ಸಂತಸ ದುಃಖವಾಗಿ ಪರಿಣಮಿಸಿತು. ತನ್ನ ಪತಿಯ ಕಾಲು ಕೈಗಳು ಭಗ್ನವಾಗಿರುವುದನ್ನು ಕಂಡು, ಅವಳ ಹೃದಯವೇ ಒಡೆದಂತಾ ಯಿತು. ಬಹಳ ಸಂತಾಪಪಟ್ಟಳು. ಕರುಣಾಳುವಾದ ಜಗನ್ನಾಥ ಪ್ರಭುವು ನನ್ನ ಪತಿಯ ಕಾಲು ಕೈಗಳನ್ನು ಮತ್ತೆ ನೀಡಲಾರನೆ? ಎಂದು ಹೃತ್ಪೂರ್ವಕವಾಗಿ ಭಗವಂತನನ್ನು ಪ್ರಾರ್ಥಿಸಿದಳು. ಪತಿ ವ್ರತೆಯ ಪಾವನ ಸ್ಪರ್ಶದಿಂದ ಒಡನೆ ಜಯದೇವನ ದೇಹದಲ್ಲಿ ಕೈಕಾಲುಗಳು ಮತ್ತೆ ಮೂಡಿದವು. ಅವರಿಬ್ಬರೂ ಅನ್ಯೋನ್ಯವಾಗಿ ಜೀವಿಸಿದರು.

### ಪದ್ಮಾವತಿಯ ಪತಿವ್ರತಾ ಧರ್ಮ

ಒಮ್ಮೆ ರಾಜನ ಸಹೋದರನು ವೃದ್ಧಾಪ್ಯದಿಂದಾಗಿ ಮರಣ ಹೊಂದಿನು. ಅವನ ಹೆಂಡತಿ ಅವನೊಡನೆ ಸಹಗಮನ ಮಾಡಲು ನಿಶ್ಚಯಿಸಿದಳು. ಇದನ್ನು ನೋಡಲು ಪದ್ಮಾವತಿಯೂ ಬಂದಳು. ''ಇದೇನು ಪತಿವ್ರತಾ ಧರ್ಮ! ಗಂಡನ ಮರಣದ ಸುದ್ದಿ ಕೇಳಿದ ತಕ್ಷಣ ಹೆಂಡತಿಯ ಪ್ರಾಣ ಹೋಗಬೇಕು. ಆಗಮಾತ್ರ ಅವಳು ಗಂಡನ ಜೊತೆಗೆ ನಿಷ್ಠೆಯಿಂದ ನಡೆದುಕೊಂಡಿದ್ದಳು ಎಂದರ್ಥ'' ಎಂದಳು. ಈ ಮಾತನ್ನು ರಾಣಿಯೂ ಕೇಳಿಸಿಕೊಂಡಳು. ''ನಿನಗೂ ಇಂಥ ಪರಿಸ್ಥಿತಿ ಒದಗಿಬಂದಾಗ ನೀನು ಹೇಳಿದ ಹಾಗೆಯೇ ಆಗುವುದೇನು? ಪರೀಕ್ಷಿಸಿ ನೋಡುತ್ತೇನೆ'' ಎಂದು ಸವಾಲು ಎಸೆದಳು.

ಒಮ್ಮೆ ರಾಜ ಮತ್ತು ಜಯದೇವ ಇಬ್ಬರೂ ಜೊತೆಗೂಡಿ ಜಗ ನ್ನಾಥ ಸ್ವಾಮಿಯ ಮಂದಿರಕ್ಕೆ ಹೋಗಿದ್ದರು. ಅಂದು ಅಲ್ಲಿಯೇ ರಾತ್ರಿಯನ್ನು ಕಳೆಯುವುದು ಎಂದು ನಿರ್ಧಾರ ಮಾಡಿಕೊಂಡಿ ದ್ದರು. ರಾಣಿಗೆ ಪದ್ಮಾವತಿಯನ್ನು ಪರೀಕ್ಷಿಸಬೇಕೆಂಬ ಹುಚ್ಚು ಆಸೆ. ಅಂದು ಬೆಳಗಿನ ಜಾವ ಪದ್ಮಾವತಿಗೆ ಹೇಳಿಕಳಿಸಿದಳು. ''ನಿನ್ನ ಗಂಡ ದೇಗುಲದಲ್ಲಿ ಪ್ರಾಣತ್ಯಾಗ ಮಾಡಿದ'' ಎಂದು ಹೇಳಿದಳು. ಪದ್ಮಾವತಿಗೆ ಇದೊಂದು ಭರಿಸಲಾಗದ ಆಘಾತವಾಗಿಬಿಟ್ಟಿತು. ಒಡನೆ ಅವಳು ಪ್ರಜ್ಞೆ ತಪ್ಪಿ ನೆಲಕ್ಕೆ ಬಿದ್ದಳು; ಅಸು ನೀಗಿದಳು.

ಇಷ್ಟು ಹೊತ್ತಿಗೆ ರಾಜ ಮತ್ತು ಜಯದೇವ ದೇವಸ್ಥಾನದಿಂದ ತಿರುಗಿಬಂದರು. ಪ್ರಾಣಬಿಟ್ಟಿದ್ದ ಪತ್ನಿಯನ್ನು ಕಂಡು ಜಯ ದೇವನು ದಿಗ್ಭ್ರಾಂತನಾದನು. ಆದರೂ ಸಾವರಿಸಿಕೊಂಡನು. ರಾಜನು ರಾಣಿಯನ್ನು ಪ್ರಶ್ನಿಸಿದಾಗ, ಅವಳು ನಡೆದದ್ದನ್ನೆಲ್ಲ ತಿಳಿಸಿ, ಕ್ಷಮೆ ಕೇಳಿದಳು. ರಾಜನಿಗೆ ರಾಣಿಯ ಮೇಲೆ ತುಂಬ

ಕೋಪ ಬಂತು. ''ನಿನ್ನನ್ನು ಬಿಟ್ಟುಬಿಡುತ್ತೇನೆ'' ಎಂದು ಕೂಗಾಡಿದನು. ಆದರೆ ಜಯದೇವನು ರಾಜನಿಗೆ ಸಾಂತ್ವನ ಮಾಡಿದನು. ''ರಾಣಿಯದೇನೂ ತಪ್ಪಿಲ್ಲ. ಅವಳು ಮುಗ್ಧೆ. ಜನರು ತಮಗೆ ಅರಿವಿಲ್ಲದೆ ಹೀಗೆ ಸುಳ್ಳಾಡಿಬಿಡುತ್ತಾರೆ'' ಎಂದನು. ಅನಂತರ ಶ್ರೀಕೃಷ್ಣನ ಸ್ಮರಣೆ ಮಾಡಿದನು. 'ತನ್ನ ಪ್ರಿಯ ಪತ್ನಿಯ ಅಕಾಲಿಕ ಮರಣವನ್ನು ತಪ್ಪಿಸು' ಎಂದು ಬೇಡಿಕೊಂಡನು. ದೇವರ ಅನುಗ್ರಹದಿಂದ ಪದ್ಮಾವತಿಗೆ ಮತ್ತೆ ಜೀವ ಬಂತು. ರಾಣಿಯು ಪದ್ಮಾವತಿಯ ಕಾಲಿಗೆ ಬಿದ್ದು ಕ್ಷಮೆ ಕೋರಿದಳು.

## ಅಂತಿಮ ದಿನಗಳು

ಜಯದೇವನು ಪ್ರತಿದಿನವೂ ಗಂಗಾಸ್ನಾನ ಮಾಡುತ್ತಿದ್ದನು. ಹಾಗೆಂದು ವ್ರತ ಕೈಗೊಂಡಿದ್ದನು. ಕ್ರಮೇಣ ಅವನಿಗೆ ವಯಸ್ಸಾಯಿತು. ಗಂಗೆಯ ತನಕ ನಡೆದುಕೊಂಡು ಹೋಗುವುದು ಕಷ್ಟವಾಯಿತು. ಒಂದು ದಿನ ಗಂಗಾಸ್ನಾನ ಮುಗಿಸಿ ಬರುವಾಗ, ಪ್ರಜ್ಞೆ ತಪ್ಪಿ ಬಿದ್ದುಬಿಟ್ಟನು. ರಾಜನು ಪಲ್ಲಕ್ಕಿಯ ವ್ಯವಸ್ಥೆ ಮಾಡಿದನು. ಆದರೆ ಜಯದೇವನು ಅದನ್ನು ನಿರಾಕರಿಸಿಬಿಟ್ಟನು. ಕೊನೆಗೆ ಗಂಗೆಯೇ ಜಯದೇವನ ಮನೆಯ ಬಾವಿಯಲ್ಲಿ ಪ್ರತ್ಯಕ್ಷಳಾದಳಂತೆ. ಆ ಸಂದರ್ಭದಲ್ಲಿ ಬಾವಿ ತುಂಬ ಕಮಲದ ಹೂವುಗಳು ಬಿರಿದವಂತೆ. ಇದು ಜಯದೇವನ ತಪಸ್ಸು ಮತ್ತು ಭಕ್ತಿಯ ಫಲವಲ್ಲದೆ ಬೇರೇನು?

ಕಾಲಾಂತರದಲ್ಲಿ ಜಯದೇವನು ತನ್ನ ಇಷ್ಟದೇವನಾದ ಶ್ರೀಕೃಷ್ಣನ ಪಾದಗಳನ್ನು ಸೇರಿದನು. ಜಯದೇವ ಸರಳಜೀವಿ, ವಿನಯವಂತ, ಅವನದು ಅಕೃತ್ರಿಮ ಸ್ವಭಾವ. ಅಪರಿಗ್ರಹ ಅವನ ಸ್ವಭಾವದಲ್ಲಿಯೇ ಮನೆಮಾಡಿತ್ತು. ಯಾವತ್ತೂ ಶ್ರೀಕೃಷ್ಣ ಧ್ಯಾನದಲ್ಲಿ ಆನಂದ ಮತ್ತು ತನ್ಮಯತೆಗಳನ್ನು ಅವನು ಕಂಡುಕೊಳ್ಳುತ್ತಿದ್ದನು. ಅವನಿಗೆ ಸಂನ್ಯಾಸ ಧರ್ಮದ ತಿರುಳಿನ ಅರಿವಿತ್ತು. ಮಾನಸಿಕವಾಗಿ ಅವನು ಸಂನ್ಯಾಸೀ ಜೀವನವನ್ನೇ ನಡೆಸಿದನು. ತೋರಿಕೆಗೆ ಮಾತ್ರ ಗೃಹಸ್ಥ ಜೀವನವನ್ನು ನಡೆಸಿದನು.

ಗೌಡೀಯ ಸಂಪ್ರದಾಯದ ಪ್ರಕಾರ ಜಯದೇವನ ಕಥೆ ಇದಕ್ಕಿಂತ ಸಂಪೂರ್ಣ ಭಿನ್ನವಾಗಿದೆ. ತಂದೆ ತಾಯಿಗಳ ಹೆಸರು, ಹುಟ್ಟಿದ ಊರು, ವೃತ್ತಾಂತಗಳು ಎಲ್ಲವೂ ಬೇರೆಯ ರೀತಿ ಇವೆ. ಆ ಕಥೆಯಲ್ಲಿ ಅವನು ಬೃಂದಾವನಕ್ಕೆ ಹೋದುದರ ವರ್ಣನೆ ಬರುತ್ತದೆ. ಅಲ್ಲಿ ರಾಧಾ-ಮಾಧವ ವಿಗ್ರಹವನ್ನು ಅವನು ಪೂಜಿಸುತ್ತಿದ್ದನಂತೆ. ಅದು ಇಂದೂ ಜೈಪುರದ ಮಂದಿರದಲ್ಲಿ ಇದೆ ಎಂದು ಹೇಳುತ್ತಾರೆ. ಜಯದೇವನು ಬಂಗಾಳದ ನವದ್ವೀಪದಲ್ಲಿ ನೆಲೆಸಿದ್ದನು; ಬಂಗಾಳದ ರಾಜ ಲಕ್ಷ್ಮಣಸೇನನು ಜಯದೇವನ ಶಿಷ್ಯನಾಗಿದ್ದನು ಎಂದೂ ತಿಳಿಸಲಾಗಿದೆ. ಈ ರಾಜನು ಚಂಪಕಹಟ್ಟ ಎಂಬ ಚಂಪಕ ಹೂವಿನ ಮರಗಳಿರುವ ಉದ್ಯಾನವನವನ್ನು ಜಯದೇವನಿಗೆ ವಾಸಕ್ಕಾಗಿ ನೀಡಿದನು ಎಂಬ ಐತಿಹ್ಯವೂ ಇದೆ. ಕೆಲವು ಘಟನೆಗಳು ಸಮಾನವಾಗಿಯೂ ಇದೆ. ಉದಾಹರಣೆಗೆ ಪದ್ಮಾವತಿಯ ಜೊತೆಗಿನ ವಿವಾಹ. ಜಯದೇವನ ಈ ಭಕ್ತಿಮಾರ್ಗವು ಮುಂದೆ ಚೈತನ್ಯ ಮಹಾಪ್ರಭುವಿನ ನೇತೃತ್ವದಲ್ಲಿ ಮಹಾ ಆಂದೋಲನವಾಗಿ ಬೆಳೆಯಿತು. ಚೈತನ್ಯ ಮಹಾಪ್ರಭುವೂ 'ಗೀತಗೋವಿಂದ'ವನ್ನು ಬಹಳ ಮೆಚ್ಚಿಕೊಂಡಿದ್ದನು. ಮತ್ತೆ ಮತ್ತೆ ಅದರಲ್ಲಿನ ಅಷ್ಟಪದಿ ಹಾಡುಗಳನ್ನು ಹಾಡಿಕೊಳ್ಳುತ್ತಿದ್ದನು. ಈ ಮಹಾನ್ ಗ್ರಂಥದ ಮತ್ತೊಂದು ಪದ್ಯದ ಮೂಲಕವೇ ಭಕ್ತ ಸಂತ ಜಯದೇವನ ಪುಣ್ಯ ಕಥಾನಕಕ್ಕೆ ಮಂಗಳವನ್ನು ಹಾಡೋಣ:

**ಪ್ರಲಯ ಪಯೋಧಿ ಜಲೇ ಧೃತವಾನಸಿ ವೇದಮ್**
**ವಿಹಿತ ವಹಿತ್ರ ಚರಿತ್ರಮಖೇದಮ್ ।**
**ಕೇಶವ! ಧೃತ ಮೀನಶರೀರ ! ಜಯ ಜಗದೀಶ ಹರೇ ॥**

**ಕ್ಷತ್ರಿಯ ರುಧಿರಮಯೇ ಜಗದಪಗತಪಾಪಂ**
**ಸ್ನಪಯಸಿ ಪಯಸಿ ಶಮಿತಭವತಾಪಮ್ ।**
**ಕೇಶವ! ಧೃತ ಭೃಗುಪತಿರೂಪ ! ಜಯ ಜಗದೀಶ ಹರೇ ॥**

**ವಿತರಸಿ ದಿಕ್ಷು ರಣೇ ದಿಕ್ಪತಿ ಕಮನೀಯಂ**
**ದಶಮುಖಮೌಲಿಬಲಿಂ ರಮಣೀಯಮ್।**
**ಕೇಶವ! ಧೃತ ರಾಮಶರೀರ ! ಜಯ ಜಗದೀಶ ಹರೇ ॥**

**ನಿಂದಸಿ ಯಜ್ಞವಿಧೇರಹಹ ಶ್ರುತಿಜಾತಂ**
**ಸದಯ ಹೃದಯ ದರ್ಶಿತ ಪಶುಘಾತಮ್ ।**
**ಕೇಶವ! ಧೃತ ಬುದ್ಧಶರೀರ ! ಜಯ ಜಗದೀಶ ಹರೇ ॥**

**ಶ್ರೀಜಯದೇವ ಕವೇರಿದಮುದಿತಮುದಾರಂ**
**ಶೃಣು ಶುಭದಂ ಸುಖದಂ ಭವಸಾರಮ್ ।**
**ಕೇಶವ! ಧೃತ ದಶವಿಧರೂಪ ! ಜಯ ಜಗದೀಶ ಹರೇ ॥**

***ಕನ್ನಡ ಅನುವಾದ:***

ಪ್ರಳಯ ಸಮುದ್ರದಲ್ಲಿ ನಿಮಗ್ನವಾದ ವೇದಗಳನ್ನು ನೌಕೆಯಲ್ಲಿ ತುಂಬುವಂತೆ ಮತ್ಸ್ಯರೂಪವನ್ನು ಧರಿಸಿ ಅನಾಯಾಸವಾಗಿ ರಕ್ಷಿಸಿದೆ. ಅಂಥ ಜಗತ್ಪತಿಯಾದ ಹೇ ಕೇಶವನೆ, ನಿನಗೆ ನಮಸ್ಕಾರ.

ಲೋಕಕಂಟಕರಾದ ಕ್ಷತ್ರಿಯರ ಪಾಪಲೇಪದಿಂದ ಕಳಂಕಿತವಾದ ಭೂಮಿಯನ್ನು ಅವರ ರಕ್ತಜಲದಿಂದ ತೊಳೆದಂತೆ, ಭವತಾಪವನ್ನು ಉಪಶಮನಗೊಳಿಸಿದ ಪರಶುರಾಮನ ರೂಪಧಾರಿಯಾದ ಜಗದೀಶನೆ, ನಿನಗೆ ನಮಸ್ಕಾರ.

ಕೇಶವನೆ, ರಾಮಶರೀರವನ್ನು ಧರಿಸಿ, ರಮಣೀಯವಾದ ರಣಯಜ್ಞದಲ್ಲಿ ದಿಕ್ಪಾಲಕರಿಗೆ ಪ್ರಿಯವಾದ ರಾವಣನ ತಲೆಗಳನ್ನು ಬಲಿಗೊಡುತ್ತಿರುವೆ. ಜಗತ್ಪತಿಯೆ, ನಿನಗೆ ನಮಸ್ಕಾರ.

ಬುದ್ಧಶರೀರಿಯಾಗಿ ಯಜ್ಞಯಾಗಗಳಲ್ಲಿ ಪಶುಬಲಿಯನ್ನು ವಿಧಿಸುವ ವೇದಗಳನ್ನು ಖಂಡಿಸಿ, ಸರ್ವಭೂತಾನುಕಂಪವನ್ನು ಪ್ರಕಟಿಸಿದ ಕರುಣಾಮೂರ್ತಿ ಹೇ ಜಗದೀಶನೆ, ನಿನಗೆ ನಮಸ್ಕಾರ.

ಸುಖಕರವೂ, ಶುಭಕರವೂ, ಉದಾರವೂ ಗಂಭೀರವೂ ಆದ ದಶಾವತಾರ ವರ್ಣನರೂಪಿಯಾದ ಜಯದೇವಕವಿಯ ಮಾತುಗಳನ್ನು ಆಲಿಸಿ. *(ಗೀತಗೋವಿಂದ, ಸರ್ಗ ೧., ಅಷ್ಟಪದಿ ೧)*